**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.331/2021**

ಪಿ.ಡಬ್ಲ್ಯೂಃ 6

ಸಿ.ಡಬ್ಲ್ಯೂಃ 15

| | | |
|---|---|---|
| ಹೆಸರು | ಃ | ಯೋಗೇಶ್ ಕೆ. ಎಂ |
| ತಂದೆಯ ಹೆಸರು | ಃ | ಮಹಾಲಿಂಗಪ್ಪ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಸಿ ಪಿ ಐ |
| ವಾಸಸ್ಥಳ | ಃ | ಬೇಲೂರು |

ಸಾಕ್ಷಿದಾರರು ನ್ಯಾಯಾಲಯದ ಮುಂದೆ ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿರುತ್ತಾರೆ.

**ದಿನಾಂಕಃ 05-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ದಿಃ **11-10-2019** ರಿಂದ **02-06-2021** ರವರೆಗೆ ತರೀಕೆರೆಗ ್ರಾಮಾತಂರ ವೃತ ಸಿಪಿ ಐ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 12-02-2020 ರಂದು ಚಾಸಾ-13 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ಅದೇ ದಿನ ಚಾಸಾ-14 ರವರಿಗೆ ಶವಪಂಚನಾಮೆ ಜರುಗಿಸಲು ಆದೇಶ ನೀಡಿದ್ದು, ನಂತರ ಅದೇ ದಿನ ಚಾಸಾ-14 ರವರು ಶವಪಂಚಾನಾಮೆ ಜರುಗಿಸಿ, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅದೇ ದಿನ ಕೃತ್ಯ ನಡೆದ ಸ್ಥಳದಲ್ಲಿ ರಂಗಪ್ಪನವರ ಫಾರಂ ಹತ್ತಿರ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇವೆ. ಮಹಜರ್ ಸಮಯದಲ್ಲಿ ಲೆಪ್ಪದಿಂದ ಕೂಡಿದ 5 ನೀಲಿ ಬಣ್ಣದ ಗಾಜಿನ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಪೋಟೋವನ್ನು ತೆಗೆಸಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇವೆ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲನ್ನು ಮಾಲುಪಟ್ಟಿ ಸಂಖ್ಯೆ 13/2020 ರಲ್ಲಿ ನಮೂದು ಮಾಡಿ ಸಿಬ್ಬಂಧಿಯ ಮುಖಾಂತರ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ

ಲಿಂಗದಹಳ್ಳಿ ಪೊಲೀಸ್ ಠಾಣಾ ಆವರಣಕ್ಕೆ ಹೋಗಿ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ವಾಹನ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿ, ಆ ಸಮಯದಲ್ಲಿ ಅಪಘಾತಕ್ಕೆ ಒಳಗಾದ ಟಿ ವಿ ಎಸ್ ರಾಂಡಮ್ ಬೈಕನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಪೋಟೋ ತೆಗೆಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 17-02-2020 ರಂದು ಮೃತ ಜುಂಜಾನಾಯ್ಕರವರ ಪಿ ಎಂ ವರದಿಯನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 24-02-2020 ರಂದು ಅಪಘಾತಕ್ಕೆ ಒಳಗಾದ ಟಿ ವಿ ಎಸ್ ಬೈಕನ್ನು ಐ ಎಂ ವಿ ತಪಾಸಣೆಗೆ ಒಳಪಡಿಸಿರುತ್ತೇನೆ. ದಿಃ 28-02-2020 ರಂದು ಚಾಸಾ-11 ರವರಿಂದ ಐ ಎಂ ವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 02-03-2020 ರಂದು ಅಪಘಾತಕ್ಕೆ ಒಳಗಾದ ಟಿ ವಿ ಎಸ್ ಬೈಕನ್ನು ಆರ್ ಸಿ ಮಾಲೀಕರಾದ ಕುಮಾರ್ ರವರಿಗೆ ಇಂಡಿಮಿನಿಟಿ ಬಾಂಡ್ ಪಡೆದು ಬಿಟ್ಟುಕೊಟ್ಟಿರುತ್ತೇನೆ. ದಿಃ 23-03-2020 ರಂದು ಅಪಘಾತ ಉಂಟು ಮಾಡಿದ ಲಾರಿ ನಂ.ಕೆಎ 52 7841 ನ್ನು ಪಂಚರಾದ ಚಾಸಾ-10 ಮತ್ತು 5 ರವರ ಸಮಕ್ಷಮ ವಾಹನ ಅಮಾನತ್ತು ಮಹಜರ್ ಜರುಗಿಸಿ, ಲಾರಿಯನ್ನು ಅಮಾನತ್ತುಪಡಿಸಿಕೊಂಡು ಛಾಯಚಿತ್ರವನ್ನು ತೆಗೆಸಿರುತ್ತೇನೆ. ನಂತರ ಆರೋಪಿಯಾದ ಲಾರಿಯ ಮಾಲೀಕರಿಗೆ ಅರುಣ್ ರೋಡಿಗ್ರಸ್ ರವರಿಗೆ ಐ ಎಂ ವಿ ಕಲಂ 133 ರಡಿ ನೋಟೀಸ್ ನೀಡಿರುತ್ತೇನೆ. ಅದೇ ದಿನ ಅವರಿಂದ ಉತ್ತರವನ್ನು ಸ್ವೀಕರಿಸಿಕೊಂಡಿರುತ್ತೇನೆ. ಆರೋಪಿಗೆ ದಸ್ತಗಿರಿ ಕ್ರಮ ಜರುಗಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಲಾರಿ ಮಾಲೀಕರಾದ ಆರೋಪಿಯಿದ ಲಾರಿಯದಾಖಲಾತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ಲಾರಿಯ ತಪಾಸಣೆ ಗಾಗಿ ಚಾಸಾ-11 ರವರಿಗೆ ಮನವಿ ಪತ್ರ ನೀಡಿರುತ್ತೇನೆ. ದಿಃ 24-03-2020 ರಂದು ಪಿರ್ಯಾದಿ ಚಾಸಾ-1 ಮತ್ತು ಚಾಸಾ-4, 5 ರವರ ಮುಂದುವರಿದ ಹೇಳಿಕೆಯನ್ನುಪಡೆದುಕೊಂಡಿರುತ್ತೇನೆ. ದಿಃ 27-04-2020 ರಂದು ಆರ್ ಸಿ ಮಾಲೀಕ ಆರೋಪಿರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ಲಾರಿಯನ್ನು ಅವರ ವಶಕ್ಕೆ

ನೀಡಿರುತ್ತೇನೆ. ದಿಃ 24-05-2020 ರಂದು ಚಾಸಾ-11 ರವರಿಂದ ಲಾರಿಯ ಸಂಬಂಧ ಐ ಎಂ ವಿ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸಿಬ್ಬಂದಿಯಾದ ಕಿರಣ್ ಕುಮಾರ್ ರವರಿಂದ ಛಾಯಚಿತ್ರವನ್ನು ಸಿಡಿಗೆ ವರ್ಗಾಯಿಸಿರುವ ಬಗ್ಗೆ 65(ಬಿ) ಸರ್ಟಿಫಿಕೇಟ್ ಪಡೆದುಕೊಂಡಿರುತ್ತೆನೆ. ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷರೋಪಣಾ ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವಾಹನ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಶವಪರೀಕ್ಷೆ ವರದಿ ಆಗಿದ್ದು, ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವಾಹನ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-11 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಐ ಎಂ ವಿ ವರದಿ ಆಗಿದ್ದು, ಅದನ್ನು ಈಗಾಗಲೇ ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಮತ್ತೊಂದು ಐ ಎಂ ವಿ ವರದಿ ಆಗಿದ್ದು, ಅದನ್ನು ಈಗಾಗಲೇ ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು 133 ನೋಟೀಸ್ ಆಗಿದ್ದು, ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಮತ್ತೊಂದು 65(ಬಿ) ಸರ್ಟೀಫಿಕೇಟ್ ಆಗಿದ್ದು, ಅದನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಗಿರಿಜಾಬಾಯಿರವರ ಮುಂದುವರಿದ ಹೇಳಿಕೆ ಆಗಿದ್ದು, ಅದನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ರೇಖಾನಾಯ್ಕರವರ ಮುಂದುವರಿದ ಹೇಳಿಕೆ ಆಗಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಅದನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಮತ್ತೊಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಅದನ್ನು ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಇನ್ನೊಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಅದನ್ನು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು, ಅದನ್ನು ಎಂ ಒ -1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಕೆಪಿ ವಕೀಲರಿಂದ.**

ಆರೋಪಿತರು ಯಾವುದೇ ತಪ್ಪು ಮಾಡಿಲ್ಲದೆ ಇದ್ದರೂ ಸಹ ಅವರ ವಿರುದ್ಧ ಸುಳ್ಳು ತನಿಖೆ ಮಾಡಿ ಸುಳ್ಳು ದೋಷರೋಪಣಾ ಪಟ್ಟಿಯನ್ನು ತಯಾರು ಮಾಡಿ ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.